ಬರಲಾರದು... ಅಲ್ಲಿ ಯಾರೊಬ್ಬರ ಬಗ್ಗೆಯೂ ಯಾರೂ ಯೋಚಿಸಲಾರರು. ಬಾಲ್ಯದಲ್ಲಿಯೇ ತಂದೆತಾಯಿಯನ್ನು ಕಳೆದುಕೊಂಡು ಅನಾಥನಾದರೂ ಜೀವನದಲ್ಲಿ ಕಷ್ಟಪಟ್ಟು ಮುಂದೆ ಬಂದಿದ್ದೀಯ. ಏನನ್ನಾದರೂ ಸಾಧಿಸುವ ಛಲ ನಿನ್ನಲ್ಲಿದೆ. ನೀನೊಬ್ಬ ಎಂಜಿನಿಯರಾಗಿ ಆಧುನಿಕ ತಂತ್ರಜ್ಞಾನವನ್ನು ಅರಿತಿರುವ ಬುದ್ಧಿವಂತನೆಂಬುದು ನನಗೆ ಮನದಟ್ಟಾಗಿದೆ. ನಾನು ವಿನ್ಯಾಸಗೊಳಿಸಿರುವ ರೋಬೋ, ಮಾನವನ ಅವಶ್ಯಕತೆಗಳಿಗೆ ಸ್ಪಂದಿಸಿ ಅವನಿಗೆ ಉತ್ತಮ ಸಂಗಾತಿಯಾಗುತ್ತದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನಾನು ತಿಳಿದುಕೊಳ್ಳಬೇಕಿದೆ. ಅದಕ್ಕಾಗಿ ನನ್ನ ಸಂಶೋಧನೆಯ ಮುಂದಿನ ಭಾಗವಾದ ಈ ಪರೀಕ್ಷೆಯ ಕೆಲಸವನ್ನು ನಿನಗೆ ವಹಿಸಿಬೇಕೆಂದಿದ್ದೇನೆ..." ಎಂದು ಹೇಳಿ ಉತ್ತರಕ್ಕಾಗಿ ನನ್ನನ್ನೇ ದಿಟ್ಟಿಸಿ ನೋಡತೊಡಗಿದರು.

ನನಗೆ ಒಂದು ಕ್ಷಣ ಆಘಾತವಾಯಿತು. ಆದರೆ ತಕ್ಷಣವೇ ಸಾವರಿಸಿಕೊಂಡೆ. ನಾನು ಯಾರಿಗೂ ಅಂಜುವವನಲ್ಲ. ಜೀವನದಲ್ಲಿ ಮತ್ತು ವೃತ್ತಿಯಲ್ಲಿಯೂ ಸಹ ಹೊಸ ಹೊಸ ಪ್ರಯೋಗಗಳಿಗೆ ನನ್ನನ್ನು ಒಡ್ಡಿಕೊಂಡವನು.

"ಸಿದ್ಧವಾಗಿದ್ದೇನೆ ಸರ್..." ಎಂದು ಆತ್ಮವಿಶ್ವಾಸದಿಂದ ನುಡಿದೆ. ಪ್ರೊಫೆಸರರಿಗೆ ಅತ್ಯಾನಂದವಾಗಿದ್ದು ಅವರ ಮುಖದಿಂದ ತಿಳಿಯಿತು. ತಡಮಾಡದೇ ಅಲ್ಲಿಂದ ಎದ್ದು "ಫಾಲೋ ಮಿ..." ಎಂದವರು ಹಿಂತಿರುಗಿ ನೋಡದೇ ಹೊರಟೇಬಿಟ್ಟರು! ನಾನು ಅವರನ್ನು ಮೂಕ ಪ್ರಾಣಿಯಂತೆ ಹಿಂಬಾಲಿಸಿದೆ.

## ಭಾಗ - 2

ನಮ್ಮ ಅಪಾರ್ಟ್‌ಮೆಂಟಿನ ಎದುರಿನಲ್ಲಿದ್ದ ರಸ್ತೆಯಲ್ಲಿ ಸರಸರನೆ ನಡೆದು ಬಂದ ಪ್ರೊಫೆಸರರು ತುಂಬಾ ದಿನಗಳಿಂದ ಸುಣ್ಣಬಣ್ಣ ಕಾಣದ ಹಳೆಯ ತಾರಸಿ ಮನೆಯ ತುಕ್ಕು ಹಿಡಿದ ಗೇಟನ್ನು ತಳ್ಳಿಕೊಂಡು ಬಾಗಿಲಿನ ಎದುರು ನಿಂತು ಬೀಗ ತೆಗೆದು ಒಳಗೆ ನಡೆದು ದೀಪ ಹಾಕಿದರು. ಅಲ್ಲಿನ ವಾತಾವರಣ ನೋಡಿ ನಾನು ದಿಗಿಲುಗೊಂಡೆ. ಹಾಲಿನ ತುಂಬೆಲ್ಲಾ ಹರಡಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಎಲೆಕ್ಟ್ರಾನಿಕ್ ಪರಿಕರಗಳು, ಚಿಪ್ಪುಗಳು, ಮೀಟರುಗಳು, ವರ್ಕ್ ಬೆಂಚುಗಳು. ಗೋಡೆಯ ತುಂಬೆಲ್ಲಾ ವಿದ್ಯುತ್ ಸಂಪರ್ಕದ ಸ್ವಿಚ್ ಬೋರ್ಡುಗಳು, ಸಾಲ್ಡರಿಂಗ್ ಮಾಡುವ ಸಾಧನಗಳು. ಮರದ ಹಳೆಯ ಮೇಜು, ಕುರ್ಚಿಗಳು. ನನಗೆ ಕೊಂಚ ತಲೆ ತಿರುಗಿದಂತಾಯಿತು. ಪ್ರೊಫೆಸರರು ನನ್ನನ್ನು ನೋಡಿ ನಕ್ಕರು. ''ಕುಳಿತುಕೋ ವಿಶಾಲ್'' ಎಂದು ಹೇಳಿ ಅಲ್ಲಿದ್ದ ಕುರ್ಚಿಯ ಕಡೆ ಕೈ ತೋರಿಸಿ ಅವರೊಂದು ಮರದ ಕುರ್ಚಿಯನ್ನು ಎಳೆದುಕೊಂಡು ಕುಳಿತರು.

"ನನಗೆ ನನ್ನ ಮಗಳನ್ನು ಕಂಡರೆ ಇನ್ನಿಲ್ಲದ ಪ್ರೀತಿ. ಅವಳು ಈಗ ಇಪ್ಪತ್ತೆರಡು ವರ್ಷ ವಯಸ್ಸಿನ ಯುವತಿಯಿರಬಹುದು. ನಾನು ಅವಳನ್ನು ನೋಡಿಲ್ಲ. ಆದರೆ ಈಗ ಅವಳು ಹೇಗಿರಬಹುದೆಂದು ಊಹಿಸಿಕೊಂಡು ನನ್ನ ರೋಬೋಗೆ ಅವಳದ್ದೇ ರೂಪವನ್ನು ನೀಡಿದ್ದೇನೆ. ಅವಳ ಹೆಸರು ವಸುಂಧರೆ. ಅದೇ ನಾಮಕರಣವನ್ನು ರೋಬೋಗೆ ಮಾಡಿದ್ದೇನೆ" ಎಂದವರು, ''ವೈಯಿಟ್ ಫಾರ್ ಫ್ಯೂ ಮಿನಿಟ್ಸ್..." ಎಂದು ಹೇಳಿ ಎದ್ದು ಪಕ್ಕದಲ್ಲಿದ್ದ ಇನ್ನೊಂದು ಕೊಠಡಿಯ ಬಾಗಿಲು ತೆರೆದು ಒಳಗೆ ಹೋಗಿ ಬಾಗಿಲು ಮುಚ್ಚಿಕೊಂಡರು.

ಅರ್ಧ ಗಂಟೆಯಾದರೂ ಹೊರಗೆ ಬರಲಿಲ್ಲ. ನಾನು ಆತಂಕ ಕುತೂಹಲಗಳಿಂದ ಕುಳಿತಲ್ಲಿಯೇ ತಲ್ಲಣಿಸುತ್ತಿದ್ದೆ.

ಕೊಠಡಿಯ ಬಾಗಿಲು ತೆರೆದು ಪ್ರೊಫೆಸರರು ಹೊರಗೆ ಬಂದರು. ಅವರ ಹಿಂದೆಯೇ ಹೊಸ ಚೂಡಿದಾರ್ ಧರಿಸಿದ ಮುದ್ದಾದ ಹುಡುಗಿ!

ನನ್ನ ಕಣ್ಣಗಳನ್ನೇ ನಾನು ನಂಬದಾದೆ. ಪ್ರೊಫೆಸರರು ಅವರ ಮಗಳನ್ನೇ ಕರೆದುಕೊಂಡು ಬಂದು